ಅಜ್ಜ ಆಕಾಶದತ್ತ ನೋಡಿದರು. ಏನನ್ನೋ ಧ್ಯಾನಿಸಿ ಭಾವನೆಗಳಿಲ್ಲದ ಸ್ವರದಲ್ಲಿ ಹೇಳಿದರು.

“ಆ ಧೈರ್ಯ ಅವರಿಗೆಲ್ಲಿ ಬರಬೇಕು? ಅದಕ್ಕಾಗಿ ಅವರು ರಾತ್ರಿ ಯುದ್ಧ ಮಾಡಲು ಸಾಧ್ಯವಾಗುವ ಯುದ್ಧೋಪಕರಣಗಳನ್ನು ಅಮೆರಿಕದಿಂದ ತರಿಸಿದರು. ಅಲ್ಲಿಂದ ತರಿಸಿದ ಟೆಲಿಸ್ಕೋಪು ರಾತ್ರಿಯೂ ಮೂರು ಕಿ.ಮೀ. ದೂರದವರೆಗಿನ ಚಲನವಲನಗಳನ್ನು ಪತ್ತೆ ಹಚ್ಚಲು ಸಹಾಯ ಮಾಡುತ್ತಿತ್ತು. ಹೊಸ ಗನ್ನುಗಳಿಗೆ ಅಂತಹ ಸಣ್ಣ ಟೆಲಿಸ್ಕೋಪನ್ನು ಅಳವಡಿಸಿದ್ದರಂತೆ. ಸೆರೆಸಿಕ್ಕ ಈಳಂ ಸೈನಿಕರು ವೇಲುಪಿಳ್ಳೈಯ ರಹಸ್ಯ ಸ್ಥಾನವನ್ನು ತಿಳಿಸುವ ಸಂದರ್ಭ ಬರಬಹುದೆಂದು ಕುತ್ತಿಗೆಗೆ ನೇತು ಹಾಕಿದ ಸಯನೈಡ್ ಕ್ಯಾಪ್ಸೂಲು ತಿಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರಂತೆ. ಏನೇ ಆದರೂ ಯುದ್ಧದಲ್ಲಿ ಮೇಲುಗೈ ಸಾಧಿಸಿದ ಶ್ರೀಲಂಕನ್ ಸೈನಿಕರು ವೇಲುಪಿಳ್ಳೈಯ ಅಡಗುದಾಣವನ್ನು ಪತ್ತೆ ಹಚ್ಚಿ ವಿಚಾರಣೆ ನಡೆಸದೆ ಅವರನ್ನು ಕೊಂದುಬಿಟ್ಟರು. ದುರಂತ ನೋಡಿ ಸ್ವಾಮಿ. ಈಳಂಗೆ ಆರಂಭದಲ್ಲಿ ಬೆಂಬಲ ಕೊಟ್ಟ ಅಮೆರಿಕ ಕೊನೆಯಲ್ಲಿ ಲಂಕೆಗೆ ಶಸ್ತ್ರಾಸ್ತ್ರ ನೀಡಿತು. ಅದಲ್ಲದಿರುತ್ತಿದ್ದರೆ ಚೀನಾದ ಸೈನ್ಯ ಲಂಕಾದ ಬೆಂಬಲಕ್ಕೆ ಬಂದು ತನ್ನ ಸಾಮ್ರಾಜ್ಯ ವಿಸ್ತರಿಸುತ್ತಿತ್ತಂತೆ. ಇವೆಲ್ಲಾ ಪತ್ರಿಕೆಗಳಲ್ಲಿ ಬಂದ ಸುದ್ದಿಗಳು. ಯಾವುದನ್ನು ನಂಬಬೇಕು, ಯಾವುದನ್ನು ಬಿಡಬೇಕು ಒಂದೂ ಗೊತ್ತಾಗುತ್ತಿಲ್ಲ.”

ನಾನು ಕೂಡಾ ಈ ವಿಷಯಗಳನ್ನು ಓದಿದ್ದೆ. ವೇಲುಪಿಳ್ಳೈಯಂತಹ ನಾಯಕ ಸತ್ತು ಹೋದ ಪರಿ ನನ್ನನ್ನು ಮಾತಿಲ್ಲದವನಾಗಿ ಮಾಡಿತು. ನನ್ನ ಸ್ಥಿತಿಯನ್ನು ಅರ್ಥ ಮಾಡಿಕೊಂಡ ತಮಿಳಜ್ಜ ತಾವಾಗಿಯೇ ಮುಂದುವರಿಸಿದರು.

“ವೇಲುಪಿಳ್ಳೈಯ ಸಾವಿಗಿಂತಲೂ ವೇದನೆಯ ವಿಷಯವೊಂದಿದೆ ಸ್ವಾಮಿ. ಶ್ರೀಲಂಕಾದ ಸೈನಿಕರು ವೇಲುಪಿಳ್ಳೈಯ ಏಳು ವರ್ಷದ ಮಗನನ್ನು ಹಿಡಿದು ತಂದು ಹಣೆಗೆ ಗುಂಡು ಹಾರಿಸಿ ಅಮಾನವೀಯವಾಗಿ ಕೊಂದು ಹಾಕಿದರು. ಅವರು ಮನುಷ್ಯರಾ?”

ಅಜ್ಜನ ಕಣ್ಣಿನಲ್ಲಿ ನೀರು ಜಿನುಗಿತು.

“ಮುಂದೇನು ಅಜ್ಜಾ?”

“ಸ್ವಾಮಿ, ಮುಂದೇನಿದೆ? ಭಾರತದಲ್ಲಿ ಹುಟ್ಟಿದೆ. ವಿಧಿ ಎಲ್ಲೆಲ್ಲಿಗೋ ನನ್ನನ್ನು ಒಯ್ದಿತು. ಇನ್ನು ಹೆಚ್ಚು ವರ್ಷ ಬದುಕಲಾರೆ. ಭಾರತದಲ್ಲೇ ಮಣ್ಣಾಗಬೇಕೆಂಬುದು ನನ್ನ ಆಸೆ.”

ಅಜ್ಜನ ಆಸೆ ಈಡೇರಲಿ ಎಂದು ಹಾರೈಸಿ ನಾನು ಹೊರಬಂದೆ. ಒಂದು ಲೋಟಾ ಚಹಾ ಮಾಡಿಕೊಡಲಿಕ್ಕೂ ಅಜ್ಜನ ಕೋಣೆಯಲ್ಲಿ ಹಾಲಿರಲಿಲ್ಲ!


**ಬಿ. ಪ್ರಭಾಕರ ಶಿಶಿಲ**

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ. ಕನ್ನಡದಲ್ಲಿ ಇನ್ನೂರಕ್ಕೂ ಹೆಚ್ಚು ಕತೆಗಳನ್ನು ಬರೆದಿದ್ದಾರೆ. ಕತೆಗಾರ ಮತ್ತು ಕಾದಂಬರಿಕಾರ. ಕನ್ನಡಕ್ಕೆ 220 ಕೃತಿಗಳನ್ನು ನೀಡಿದ್ದಾರೆ. ಹವ್ಯಾಸಿ ನಾಟಕಕಾರ ಮತ್ತು ಯಕ್ಷಗಾನ ಕಲಾವಿದ. ಇವರ 'ಪುಂಸ್ತ್ರೀ' ಕಾದಂಬರಿ 14 ಭಾಷೆಗಳಿಗೆ ಅನುವಾದವಾಗುತ್ತಿದೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಶಿಶಿಲರು ರಚಿಸಿರುವ 160 ಕೃತಿಗಳು ಭಾರತದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅವಲೋಕನ ಕೃತಿಗಳಾಗಿವೆ.